NOTICE REGARDING REMCO FACTORY

ಶ್ರೀ ಎಂ. ಎಸ್. ಕೃಷ್ಣನ್ (ಮೇಲ್ಲೇಶ್ವರಂ):—ನಾನು ಒಂದು ನೋಟೀಸ್ ಕಳಿಸಿದ್ದೇನೆ. ಇವತ್ತು ಬೆಳಗಿನ ಪ್ರಜಾವಾಣಿ ಪತ್ರಿಕೆಯಲ್ಲಿ ಒಂದು ಆರ್ಟಿಕಲ್ ಬಂದಿದೆ' ಅದು ರೆಮ್ಕೋ ಕೈಗಾರಿಕೆ ವಿಚಾರಕ್ಕೆ ಸಂಬಂಧಪಟ್ಟಿದೆ. ಈ ಕೈಗಾರಿಕೆಯನ್ನು ಬೇರೆಯವರಿಗೆ ಮಾರಾಟ ಮಾಡುತ್ತಾರೆ, ಅದಕ್ಕೆ ಶ್ರೀ ಎಸ್. ಎಂ. ಕೃಷ್ಣರವರು ಬೆಂಬಲ ನೀಡಿದ್ದಾರೆ ಎಂಬ ವಿಚಾರ ಪತ್ರಿಕೆಯಲ್ಲಿ ಬಂದಿದೆ. ಈ ಕೈಗಾರಿಕೆಯನ್ನು ಚೂರು ಮಾಡಿ ಪಲ್ವನ್ ಕಂಪನಿಗೆ ಒಂದು ಭಾಗ, ಬಿರ್ಲಾರವರಿಗೆ ಒಂದು ಭಾಗ ಮಾರುವುದಾಗಿ ಹೀಗೆ ಚೂರುಮಾಡಿ ಬೇರೆಯವರಿಗೆ ಮಾರಾಟ ಮಾಡುವುದಾಗಿ ಆರ್ಟಿಕಲ್ ಬಂದಿದೆ. ಇದು ಗಹನವಾದ ವಿಷಯ ಯಾರಿಗೂ ಮಾರುವುದಿಲ್ಲವೆಂದು ಮಂತ್ರಿಗಳು ಹಿಂದೆ ಒಂದು ಹೇಳಿಕೆ ಕೊಟ್ಟಿದ್ದರು. ಈಗ ಮಾರಾಟಮಾಡಲು ಮಂತ್ರಿಗಳು ಬೆಂಬಲಿಸುವುದಾಗಿ ವರದಿಯಾಗಿದೆ. ಇದರ ನಿಜಾಂಶವನ್ನು ತಿಳಿಯಬೇಕಾಗಿದೆ. ಹಿಂದೆ ಒಬ್ಬ ಮ್ಯಾನೇಜಂಗ್ ಡೈರಕ್ಟರಿದ್ದರು. ಅವರೀಗ ಇಲ್ಲ.

ಅಧ್ಯಕ್ಷರು:—ಈಗ ಕೈಗಾರಿಕಾ ಸಚಿವರಿಲ್ಲ, ಕುಳಿತುಕೊಳ್ಳಿ.

Notice Re: Stoppage of Work in Drought Affected Area In Gulbarga

ಶ್ರೀ ಬಾಪೂಗೌಡ ರಾಯಪ್ಪ.—ಬರಗಾಲ ಪ್ರದೇಶದಲ್ಲಿ ಕೆಲಸ ನಿಲ್ಲಿಸಿದ್ದಾರೆ, ಇದರಿಂದ ತೊಂದರೆಯಾಗಿರುವ ಬಗ್ಗೆ ನೋಟೀಸು ಕೊಟ್ಟಿದ್ದೆ, ಅದಕ್ಕೆ ಉತ್ತರ ಬರಲಿಲ್ಲ. ಒಂದು ತಿಂಗಳಿಂದ ಲಕ್ಷಗಟ್ಟಲೆ ಜನರಿಗೆ ಕೆಲಸವಿಲ್ಲದಂತಾಗಿದೆ. ಬೆಳೆಯಾದರೂ ಕಾಳು ಕೈಗೆ ಬರುವುದು ನಿಧಾನ. ಇದರ ಬಗ್ಗೆ ಸರಕಾರ ಸ್ಟೇಟ್‌ಮೆಂಟ್ ಮಾಡಬೇಕು. ಗುಲ್ಬರ್ಗ, ಬಿದರೆ ಮುಂತಾದ ಕಡೆಗಳಲ್ಲಿ ಜನತಗೆ ಕೆಲಸವಿಲ್ಲದೆ ತೊಂದರೆಯಾಗಿದೆ. ಅಪ್ಪರ್ ಕೃಷ್ಣ ಯೋಜನೆ ಕೆಲಸ ರಸ್ತೆ ಕೆಲಸ ಮುಂತಾದುವುಗಳನ್ನು ಆಲ್ಲಿ ನಿಲ್ಲಿಸಿದ್ದಾರೆ.

ಶ್ರೀ ವಿ. ಎನ್. ಪಾಟೀಲ್.—ಜನರ ಕೈಲಿ ಕಾಸಿಲ್ಲ, ಅವರಿಗೆ ಉದ್ಯೋಗವಿಲ್ಲ. ಇಂಥ ಸಮಯದಲ್ಲಿ ಕೆಲಸ ನಿಲ್ಲಿಸಿದರೆ ಹೇಗೆ?

ಶ್ರೀ ಜೆ. ಎಲ್. ಕಬಾಡಿ.—ಕೆಲಸ ಮುಂದುವರಿಸುವ ಬಗ್ಗೆ ಒಂದು ಸ್ಟೇಟಮೆಂಟ ಸರಕಾರ ಮಾಡಲು. ಐದು ದಿವಸಗಳಿಂದ ಇದರ ಬಗ್ಗೆ ವಿನಂತಿ ಮಾಡಿಕೊಳ್ಳುತ್ತಿದ್ದೇವೆ.

ಅಧ್ಯಕ್ಷರು —೬೦೦ ಕೋಟ ರೂಪಾಯಿ ಖರ್ಚುಮಾಡಿದ್ದಾರೆ, ಸರಕಾರಕ್ಕೆ ಸದಸ್ಯರಂ ಕಳಿಸಿರಂವ ನೋಟೀಸನ್ನು ಕಳಿಸಿದೆ. ವಿವರ ಸಂಗ್ರಹಿಸಿ ಅವರು ಸ್ಟೇಟ್‌ಮೆಂಟ್ ಮಾಡುವರು. ಇದನ್ನು ನಿನ್ನೆ, ಮೊನ್ನೆ ಸಹ ಹೇಳಿದ್ದೇನೆ. ಸದಸ್ಯರಂ ಕೇಳಿದ ತಕ್ಷಣ ಸ್ಟೇಟ್‌ಮೆಂಟ್ ಮಾಡಲಂ ಹೇಗೆ ಆಗುತ್ತದೆ, ಅದನ್ನು ಪ್ರಿಪೇರ್ ಮಾಡಬೇಕಾಗುವುದು, ವಿಷಯ ಸಂಗ್ರಹಿಸಬೇಕು.

ಶ್ರೀ ವಿ. ಎನ್. ಪಾಟೀಲ್.—೬೦ ಕೋಟ ರೂಪಾಯಿ ಖರ್ಚುಮಾಡಿದ್ದರೆ ಹೆಚ್ಚು ಉಪಕಾರ ಆಯಿತು. ೬೦೦ ಕೋಟ ಎಲ್ಲ ಬರಬೇಕು ? ಕೆಲಸ ನಿಲ್ಲಿಸಿದ್ದಾರೆ.

ಶ್ರೀ ಡಿ. ದೇವರಾಜ ಅರಸ್.—ಕ್ಲೋಸ್‌ಡೌನ್ ಮಾಡಲೇಬೇಕು. ಎಲ್ಲಾ ಕಾಲದಲ್ಲೂ ಕೆಲಸ ಕೊಡುವುದಕ್ಕಾಗುವುದಿಲ್ಲ.

ಶ್ರೀ ವಿ. ಎನ್. ಪಾಟೀಲ್.—ಕಲ್ವನೆ ಇಟ್ಟುಕೊಂಡು ಮಾತನಾಡುವುದು ಸರಿಯಲ್ಲ. ಜವಾದಾರಿ ಸ್ಥಾನದಲ್ಲಿರುವ ಮುಖ್ಯ ಮಂತ್ರಿಗಳು ಈ ಮಾತು ಹೇಳುವುದು ಸರಿಯೇ? ಅವರು ಕೆಲಸ ನಿಲ್ಲಿಸುವುದು ನ್ಯಾಯವಾಗಿದೆ ಎಂದು ಹೇಳುತ್ತಿದ್ದಾರೆ.

MADAM SPEAKER.—I plead the Minister to make a statement.

SRI D. DEVARAJ URS (CHIEF MINISTER).—The Government will make a statement tomorrow (11-9-1973).